ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1991.

# *ಯಥಾರ್ಥ ಚಾರ್ಟ್‌ನ ಅರ್ಥವಾಗಿದೆ- ಪ್ರಗತಿ ಮತ್ತು ಪರಿವರ್ತನೆ*

(यथार्थ चार्ट का अर्थ है - प्रगति और परिवर्तन)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಹೊಸ ವರ್ಷದ ಸಂದರ್ಭವಾಗಿ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಹೇಳಿದರು.**

ಇಂದು ಬಾಪ್‌ದಾದಾ ತನ್ನ ವಿಶ್ವನವನಿರ್ಮಾತ ಮಕ್ಕಳನ್ನು ನೋಡುತ್ತಿದ್ದಾರೆ. ಇಂದಿನ ದಿನ ಹೊಸವರ್ಷದ ಆರಂಭವನ್ನು ಪ್ರಪಂಚದಲ್ಲಿ ನಾಲ್ಕಾರುಕಡೆ ಆಚರಿಸುತ್ತಾರೆ. ಆದರೆ ಅವರು ಹೊಸವರ್ಷವನ್ನು ಆಚರಿಸುತ್ತಾರೆ ಮತ್ತು ತಾವು ಬ್ರಾಹ್ಮಣಆತ್ಮರು ಹೊಸ ಸಂಗಮಯುಗದಲ್ಲಿ ಪ್ರತಿದಿನವನ್ನೂ ಹೊಸದಂದು ತಿಳಿದು ಆಚರಿಸುತ್ತೀರಿ. ಅವರು ಒಂದುದಿನ ಆಚರಿಸುತ್ತಾರೆ ಮತ್ತು ತಾವು ಪ್ರತೀದಿನವೂ ಹೊಸ ಅನುಭವವನ್ನು ಮಾಡುತ್ತೀರಿ. ಅವರದು ಹದ್ದಿನ ವರ್ಷದ ಚಕ್ರವಾಗಿದೆ ಮತ್ತು ಇದು ಬೇಹದ್ದಿನ ಸೃಷ್ಟಿಚಕ್ರದ ಹೊಸ ಸಂಗಮ ಯುಗವಾಗಿದೆ. ಸಂಗಮಯುಗವು ಎಲ್ಲಾ ಯುಗಗಳಲ್ಲಿ ಸರ್ವಪ್ರಕಾರದ ನವೀನತೆಯನ್ನು ತರುವ ಯುಗವಾಗಿದೆ. ತಾವೆಲ್ಲರೂ ಅನುಭವ ಮಾಡುತ್ತೀರಿ- ಸಂಗಮಯುಗೀ ಬ್ರಾಹ್ಮಣ ಜೀವನವು ಹೊಸಜೀವನವಾಗಿದೆ. ಹೊಸಜ್ಞಾನದ ಮೂಲಕ ಹೊಸವೃತ್ತಿ, ಹೊಸದೃಷ್ಟಿ ಮತ್ತು ಹೊಸಸೃಷ್ಟಿಯಲ್ಲಿ ಬಂದುಬಿಟ್ಟಿದ್ದೀರಿ. ದಿನ-ರಾತ್ರಿ, ಪ್ರತೀಸಮಯ. ಪ್ರತಿಸೆಕೆಂಡ್ ಹೊಸದೆನಿಸುತ್ತದೆ. ಸಂಬಂಧವು ಎಷ್ಟು ಹೊಸದಾಗಿಬಿಟ್ಟಿತು. ಹಳೆಯ ಸಂಬಂಧ ಮತ್ತು ಬ್ರಾಹ್ಮಣ ಸಂಬಂಧದಲ್ಲಿ ಎಷ್ಟೊಂದು ಅಂತರವಿದೆ. ಹಳೆಯ ಸಂಬಂಧಗಳ ಪಟ್ಟಿಯನ್ನು ಸ್ಮೃತಿಗೆ ತಂದುಕೊಳ್ಳಿರಿ. ಎಷ್ಟೊಂದು ಉದ್ದವಾಗಿದೆ! ಆದರೆ ಸಂಗಮಯುಗೀ ಹೊಸಯುಗದ ಹೊಸಸಂಬಂಧವು ಎಷ್ಟಿದೆ? ಉದ್ದವಾದ ಪಟ್ಟಿಯಿದೆಯೇ? ಬಾಪ್‌ದಾದಾ ಮತ್ತು ಸಹೋದರ-ಸಹೋದರಿಯರು. ಎಷ್ಟು ನಿಸ್ವಾರ್ಥ ಪ್ರೀತಿಯ ಸಂಬಂಧವಾಗಿದೆ. ಅಲ್ಲಿನದು ಅನೇಕ ಸ್ವಾರ್ಥದ ಸಂಬಂಧವಾಗಿದೆ ಆದ್ದರಿಂದ ಹೊಸಯುಗ ಚಿಕ್ಕದಾದ ಹೊಸ ಬ್ರಾಹ್ಮಣ ಸಂಸಾರವೇ ಅತೀಪ್ರಿಯವಾಗಿದೆ.

ಪ್ರಪಂಚದವರು ಒಂದು ದಿನ ಮಾತ್ರ ಒಬ್ಬರು ಇನ್ನೊಬ್ಬರಿಗೆ ಶುಭಾಷಯಗಳನ್ನು ಹೇಳುತ್ತಾರೆ ಮತ್ತು ತಾವು ಏನು ಮಾಡುತ್ತೀರಿ? ಬಾಪ್‌ದಾದಾ ಏನು ಮಾಡುತ್ತಾರೆ? ಪ್ರತೀಸೆಕೆಂಡ್ ಪ್ರತೀ ಸಮಯ, ಪ್ರತಿಯೊಬ್ಬ ಆತ್ಮನಪ್ರತಿ ಶುಭಭಾವನೆ-ಶುಭಕಾಮನೆಯ ಶುಭಾಷಯಗಳನ್ನು ನೀಡುತ್ತಾರೆ. ಯಾರು ಯಾರಿಗಾದರೂ ಯಾವುದೇ ಉತ್ಸವದ ದಿನದ ಶುಭಾಷಯಗಳನ್ನು ಕೊಡುವಾಗ ಏನು ಹೇಳುತ್ತಾರೆ? ಖುಷಿಯಾಗಿ ಇರಿ, ಸುಖಿಯಾಗಿ ಇರಿ, ಶಕ್ತಿಶಾಲಿಯಾಗಿ ಇರಿ. ಆರೋಗ್ಯವಂತರಾಗಿ ಇರಿ. ತಾವು ಪ್ರತೀ ಸಮಯ ಎಲ್ಲಾ ಸೇವೆ ಮಾಡುತ್ತೀರಿ? ಆತ್ಮರಿಗೆ ಹೊಸಜೀವನವನ್ನು ನೀಡುತ್ತೀರಿ. ಬಾಪ್‌ದಾದಾರವರು ತಮ್ಮೆಲ್ಲರಿಗೂ ಹೊಸಜೀವನವನ್ನು ನೀಡಿದ್ದಾರಲ್ಲವೆ ಮತ್ತು ಈ ಹೊಸಜೀವನದಲ್ಲಿ ಇವೆಲ್ಲಾ ಶುಭಾಷಯಗಳು ಸದಾಕಾಲಕ್ಕಾಗಿ ಅವಶ್ಯವಾಗಿ ಪ್ರಾಪ್ತಿಯಾಗುತ್ತವೆ. ತಮ್ಮಂತಹ ಅದೃಷ್ಟವಂತರು ಖುಷಿಯ ಖಜಾನೆಗಳಿಂದ ಸಂಪನ್ನರು, ಸದಾ ಸುಖಿಗಳು ಮತ್ಯಾರು ಇರಲು ಸಾಧ್ಯ! ಈ ನವೀನತೆಯ ವಿಶೇಷತೆಯು ತಮ್ಮ ದೇವತಾ ಜೀವನದಲ್ಲಿಯೂ ಇರುವುದಿಲ್ಲ. ಈಗ ಪ್ರತೀ ಸಮಯ ಬಾಪ್‌ದಾದಾರವರ ಮೂಲಕ ಶುಭಾಷಯಗಳು, ಅಭಿನಂದನೆಗಳು, ಆಶೀರ್ವಚನಗಳು ಸಿಗುತ್ತಲೇ ಇರುತ್ತವೆ. ಪ್ರಪಂಚದವರು ಹಾಡುತ್ತಾರೆ. ಕುಣಿಯುತ್ತಾರೆ ಮತ್ತು ತಿನ್ನುತ್ತಾರೆ ಆದರೆ ತಾವೇನು ಮಾಡುತ್ತೀರಿ? ಪ್ರತೀ ಸೆಕೆಂಡ್ ಹಾಡುತ್ತೀರಿ, ನಲಿಯುತ್ತಾ ಇರುತ್ತೀರಿ ಮತ್ತು ಪ್ರತೀದಿನ ಬ್ರಹ್ಮಾಭೋಜನವನ್ನು ತಿನ್ನುತ್ತಾ ಇರುತ್ತೀರಿ. ಅವರಾದರೆ ವಿಶೇಷವಾಗಿ ಔತಣಗಳನ್ನು ಏರ್ಪಡಿಸುತ್ತಾರೆ ಮತ್ತು ತಮ್ಮದು ಸದಾ ಸಂಘಟನೆಯ ಔತಣವು ಆಗುತ್ತಲೇ ಇರುತ್ತದೆ. ಔತಣದಲ್ಲಿ ಮಿಲನವಾಗುತ್ತದೆಯಲ್ಲವೆ. ತಾವು ಬ್ರಾಹ್ಮಣರದು ಅಮೃತವೇಳೆಯಿಂದಲೇ ಔತಣವು ಆರಂಭವಾಗಿಬಿಡುತ್ತದೆ. ಮೊದಲು ಬಾಪ್‌ದಾದಾರವರೊಂದಿಗೆ ಆಚರಿಸುತ್ತೀರಿ. ಒಬ್ಬರಲ್ಲಿ ಅನೇಕ ಸಂಬಂಧ ಮತ್ತು ಸ್ವರೂಪಗಳಿಂದ ಆಚರಿಸುತ್ತೀರಿ ನಂತರ ಪರಸ್ಪರ ಬ್ರಾಹ್ಮಣರು ತರಗತಿಗೆ ಬರುತ್ತೀರೆಂದರೆ ಸಂಘಟನೆಯಲ್ಲಿ ಮಿಲನ ಮಾಡುತ್ತೀರಲ್ಲವೆ, ಮುರಳಿಯನ್ನು ಕೇಳುತ್ತಾ-ಕೇಳುತ್ತಾ ಹಾಡುತ್ತೀರಿ, ನಲಿಯುತ್ತೀರಿ, ಪ್ರತೀ ಸಮಯ ಉತ್ಸಾಹ ಸಂಪನ್ನ ಜೀವನದಲ್ಲಿ ಹಾರುತ್ತಾ ಇರುತ್ತೀರಿ. **ಬ್ರಾಹ್ಮಣ ಜೀವನದ ಶ್ವಾಸವೇ ಉತ್ಸಾಹವಾಗಿದೆ.** ಒಂದುವೇಳೆ ಉತ್ಸಾಹವು ಕಡಿಮೆಯಾದರೆ ಬ್ರಾಹ್ಮಣ ಜೀವನವನ್ನು ಜೀವಿಸಲು ಮಜಾ ಇರುವುದಿಲ್ಲ. ಹೇಗೆ ಶರೀರದಲ್ಲಿಯೂ ಸಹ ಶ್ವಾಸದ ಗತಿಯು ಯಥಾರ್ಥವಾಗಿ ನಡೆಯುತ್ತಿದ್ದರೆ ಒಳ್ಳೆಯ ಆರೋಗ್ಯವೆಂದು ತಿಳಿಯಲಾಗುತ್ತದೆ. ಒಂದುವೇಳೆ ಕೆಲವೊಮ್ಮೆ ಬಹಳ ತೀವ್ರಗತಿಯಿಂದ ನಡೆದು ಕೆಲವೊಮ್ಮೆ ನಿಧಾನ ಗತಿಯಾದರೆ ಒಳ್ಳೆಯ ಆರೋಗ್ಯವೆಂದು ಹೇಳಲಾಗುವುದಿಲ್ಲ ಅಲ್ಲವೆ. ಹಾಗೆಯೇ ಬ್ರಾಹ್ಮಣಜೀವನವೆಂದರೆ ಉತ್ಸಾಹ, ನಿರಾಶೆಯಲ್ಲ. ಸರ್ವಆಸೆಗಳನ್ನು ಪೂರ್ಣ ಮಾಡುವಂತಹ ತಂದೆಯ ಮಕ್ಕಳಾಗಿಬಿಟ್ಟಿದ್ದೀರಿ ಅಂದಮೇಲೆ ನಿರಾಶೆ ಎಲ್ಲಿಂದ ಬಂದಿತು? **ನಿರಾಶಾವಾಧಿಗಳನ್ನು ಆಶಾವಾದಿಗಳನ್ನಾಗಿ ಮಾಡುವುದೇ ನಿಮ್ಮ ಉದ್ಯೋಗವಾಗಿದೆ**. ಇದೇ ಸೇವೆಯಾಗಿದೆಯಲ್ಲವೆ. ಇದಂತೂ ಪ್ರಪಂಚದ ಪದ್ಧತಿಯನುಸಾರ ತಾವೂ ಸಹ ಈ ಹೊಸ ದಿನಕ್ಕೆ ಮಹತ್ವಿಕೆ ಕೊಡುತ್ತಿದ್ದೀರಿ ಆದರೆ ವಾಸ್ತವದಲ್ಲಿ ತಾವೆಲ್ಲಾ ಬ್ರಾಹ್ಮಣ ಆತ್ಮರಿಗೆ ಸಂಗಮಯುಗವೇ ನವೀನತೆಯ ಯುಗವಾಗಿದೆ. ಹೊಸಪ್ರಪಂಚವನ್ನೂ ಸಹ ಈ ಸಮಯದಲ್ಲಿಯೇ ಸ್ಥಾಪನೆ ಮಾಡುತ್ತೀರಿ. ತಾವಾತ್ಮರಿಗೆ ಹೊಸಪ್ರಪಂಚದ ಜ್ಞಾನವೂ ಸಹ ಈ ಸಮಯದಲ್ಲಿಯೇ ಇದೆ. ಅಲ್ಲಿ ಅಂದರೆ ಹೊಸಪ್ರಪಂಚದಲ್ಲಿ ಹೊಸದು-ಹಳೆಯದರ ಜ್ಞಾನವಿರುವುದಿಲ್ಲ. ಹೊಸಯುಗದಲ್ಲಿ ಹೊಸಜ್ಞಾನವನ್ನು ಸ್ಥಾಪನೆ ಮಾಡುತ್ತಿದ್ದೀರಿ.

ಎಲ್ಲರೂ ತಪಸ್ಯಾ ವರ್ಷದಲ್ಲಿ ತಪಸ್ಸಿನ ಮೂಲಕ ತಮ್ಮಲ್ಲಿ ಅಲೌಕಿಕ ನವೀನತೆಯನ್ನು ತಂದುಕೊಂಡಿದ್ದೀರಾ ಅಥವಾ ಅದೇ ಹಳೆಯ ಚಲನೆಯೇ ಇದೆಯೇ? ಹಳೆಯ ಚಲನೆ ಯಾವುದಾಗಿದೆ? ಯೋಗವು ಚೆನ್ನಾಗಿದೆ. ಚೆನ್ನಾಗಿ ಅನುಭವವೂ ಆಗುತ್ತದೆ. ಮುಂದುವರೆಯುತ್ತಲೂ ಇದ್ದೀರಿ. ಧಾರಣೆಯಲ್ಲಿಯೂ ಬಹಳ ಅಂತರವಿದೆ, ಗಮನವೂ ಬಹಳ ಚೆನ್ನಾಗಿದೆ. ಸೇವೆಯಲ್ಲಿಯೂ ವೃದ್ಧಿಯು ಚೆನ್ನಾಗಿದೆ.... ಆದರೆ, ಈ ಆದರೆ ಎನ್ನುವ ಬಾಲವು ಬಂದುಬಿಡುತ್ತದೆ. ಕೆಲಕೆಲವೊಮ್ಮೆ ಈ ರೀತಿ ಆಗಿಬಿಡುತ್ತದೆ. ಈ ಕೆಲಕೆಲವೊಮ್ಮೆಯ ಬಾಲವು ಯಾವಾಗ ಸಮಾಪ್ತಿ ಮಾಡುತ್ತೀರಿ. ತಪಸ್ಯಾವರ್ಷದಲ್ಲಿ ಇದೇ ನವೀನತೆಯನ್ನು ತನ್ನಿರಿ. ಪುರುಷಾರ್ಥ ಹಾಗೂ ಸೇವೆಯ ಸಫಲತೆಯ, ಸಂತುಷ್ಟತೆಯ ಪರ್ಸೆಂಟೇಜ್ ಕೆಲವೊಮ್ಮೆ ಮೇಲೆ, ಕೆಲವೊಮ್ಮೆ ಕೆಳಗೆ- ಇದರಲ್ಲಿ ಸದಾ ಶ್ರೇಷ್ಠ ಪರ್ಸೆಂಟೇಜಿನ ನವೀನತೆಯನ್ನು ತನ್ನಿರಿ. ಹೇಗೆ ಈಗಿನ ವೈದ್ಯರುಗಳು ಹೆಚ್ಚಿನದಾಗಿ ಯಾವುದನ್ನು ಚೆಕ್ ಮಾಡುತ್ತಾರೆ? ಎಲ್ಲದಕ್ಕಿಂತ ಹೆಚ್ಚಿನದಾಗಿ

ಬಿ.ಪಿ. ಚೆಕ್ ಮಾಡುತ್ತಾರೆ. ಒಂದುವೇಳೆ ರಕ್ತದ ಒತ್ತಡವು ಹೆಚ್ಚಿಗೆ ಇದ್ದು. ಕೆಲವೊಮ್ಮೆ ಕಡಿಮೆಯಾಗಿಬಿಟ್ಟರೆ ಏನಾಗುವುದು? ಹಾಗೆಯೇ ಬಾಪ್‌ದಾದಾ ಪುರುಷಾರ್ಥದ ಪ್ರೆಶರ್‌ನ್ನು ನೋಡುತ್ತೇವೆ. ಬಹಳ ಚೆನ್ನಾಗಿ ನಡೆಯುತ್ತದೆ ಆದರೆ ಕೆಲಕೆಲವೊಮ್ಮೆ ಜಂಪ್ ಆಗುತ್ತಿರುತ್ತದೆ. ಈ ಕೆಲಕೆಲವೊಮ್ಮೆಯ ಶಬ್ಧವನ್ನು ಸಮಾಪ್ತಿ ಮಾಡಿರಿ. ಈಗಂತೂ ಎಲ್ಲರೂ ಬಹುಮಾನವನ್ನು ಪಡೆಯುವ ತಯಾರಿಯನ್ನು ಮಾಡಿಕೊಳ್ಳುತ್ತಿದ್ದೀರಲ್ಲವೆ. ಈ ಇಡೀ ಸಭೆಯಲ್ಲಿ ನಾವು ಬಹುಮಾನಕ್ಕೆ ಪಾತ್ರರಾಗಿದ್ದೇವೆ ಎಂದು ತಿಳಿಯುವವರು ಯಾರಿದ್ದೀರಿ? ಕೆಲಕೆಲವೊಮ್ಮೆ ಎನ್ನುವವರು ಬಹುಮಾನವನ್ನು ತೆಗೆದುಕೊಳ್ಳುವರೇ?

ಬಹುಮಾನವನ್ನು ತೆಗೆದುಕೊಳ್ಳುವ ಮೊದಲು ಈ ವಿಶೇಷತೆಯನ್ನು ನೋಡಿಕೊಳ್ಳರಿ. ಈ ಆರುತಿಂಗಳಿನಲ್ಲಿ **ಮೂರು ಪ್ರಕಾರದ ಸಂತುಷ್ಟತೆಯನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಾ? ಮೊದಲನೆಯದು- ಸ್ವಯಂ ಸಾಕ್ಷಿಯಾಗಿ ಪರಿಶೀಲನೆ ತನ್ನನ್ನು ಪರಿಶೀಲನೆ ಮಾಡಿಕೊಳ್ಳಿರಿ -ಸ್ವಯಂನ ಚಾರ್ಟ್‌ನಿಂದ ಸ್ವಯಂನ ಸತ್ಯಮನಸ್ಸು, ಸತ್ಯಹೃದಯದಿಂದ ಸಂತುಷ್ಟ ವಾಗಿದ್ದೇನೆಯೇ?**

**ಎರಡನೆಯದು- ಬಾಪ್‌ದಾದಾ ವಿಧಿಪೂರ್ವಕವಾಗಿ ನೆನಪಿನ ಯಾವ ಪರ್ಸೆಂಟನ್ನು ಬಯಸುತ್ತಾರೆಯೋ ಆ ವಿಧಿಪೂರ್ವಕವಾಗಿ ಮನ-ವಚನ-ಕರ್ಮ ಮತ್ತು ಸಂಪರ್ಕದಲ್ಲಿ ಸಂಪೂರ್ಣ ಚಾರ್ಟ್ ಇದ್ದಿತೇ? ಅರ್ಥಾತ್ ತಂದೆಯು ಸಂತುಷ್ಟವಾಗುವಂತೆ ಇದ್ದಿತೇ?**

**ಮೂರನೆಯದು - ಬ್ರಾಹ್ಮಣ ಪರಿವಾರವು ನಮ್ಮ ಶ್ರೇಷ್ಠ ಯೋಗಿಜೀವನದಿಂದ ಸಂತುಷ್ಟವಾಗಿದ್ದಿತೇ?** ಮೂರೂ ಪ್ರಕಾರದ ಸಂತುಷ್ಟತೆಯ ಅನುಭವ ಮಾಡುವುದು ಅರ್ಥಾತ್ ಬಹುಮಾನಕ್ಕೆ ಯೋಗ್ಯರಾಗುವುದು. ವಿಧಿಪೂರ್ವಕ ಆಜ್ಞಾಕಾರಿಗಳಾಗಿ ಚಾರ್ಟ್‌ನ್ನು ಇಟ್ಟುಕೊಳ್ಳುವ ಆಜ್ಞೆಯನ್ನು ಪಾಲನೆ ಮಾಡಿದ್ದಿರಾ? ಇಂತಹ ಆಜ್ಞಾಕಾರಿಗಳಿಗೆ ಅಂಕಗಳೂ ಸಿಗುತ್ತದೆ. ಆದರೆ ಯಾರು ಆಜ್ಞಾಕಾರಿಗಳಾಗಿ ಚಾರ್ಟ್ ಇಡುವುದರ ಜೊತೆಜೊತೆಗೆ ಪುರುಷಾರ್ಥದ ವಿಧಿ ಮತ್ತು ವೃದ್ಧಿಯ ಅಂಕಗಳನ್ನೂ ಸಹ ಪಡೆದುಕೊಳ್ಳುವರೋ ಅವರಿಗೇ ಸಂಪೂರ್ಣ ಪಾಸ್ ಮಾರ್ಕ್ಸ್ ಸಿಗುವುದು. ಯಾರು ಈ ನಿಯಮದ ಪಾಲನೆ ಮಾಡಿದ್ದಾರೆಯೋ ಸರಿಯಾದ ರೀತಿಯಿಂದ ಚಾರ್ಟ್ ಬರೆದಿದ್ದಾರೆಯೋ ಅವರೂ ಸಹ ಬಾಪ್‌ದಾದಾರವರ ಮೂಲಕ, ಬ್ರಾಹ್ಮಣ ಪರಿವಾರದ ಮೂಲಕ ಶುಭಾಷಯಗಳನ್ನು ಪಡೆಯಲು ಪಾತ್ರರಾಗುತ್ತಾರೆ ಆದರೆ ಸರ್ವರ ಸಂತುಷ್ಟತೆಯ ಆಶೀರ್ವಾದಗಳನ್ನು ತೆಗೆದುಕೊಳ್ಳುವವರೇ ಬಹುಮಾನವನ್ನು ಪಡೆಯಲು ಯೋಗ್ಯರಾಗುತ್ತಾರೆ. ಯಥಾರ್ಥ ತಪಸ್ಸಿನ ಚಿಹ್ನೆಯೇನೆಂದರೆ ಕರ್ಮ, ಸಂಬಂಧ ಮತ್ತು ಸಂಸ್ಕಾರ ಮೂರರಲ್ಲಿಯೂ ನವೀನತೆಯ ವಿಶೇಷತೆಯೇ ಸ್ವಯಂಗೂ ಅನುಭವವಾಗಲಿ ಮತ್ತು ಅನ್ಯರಿಗೂ ಅನುಭವವಾಗಲಿ. **ಯಥಾರ್ಥ ಚಾರ್ಟ್‌ನ ಅರ್ಥವಾಗಿದೆ- ಪ್ರತೀ ಸಬ್ಜೆಕ್ಟ್‌ನಲ್ಲಿ ಪ್ರಗತಿಯ ಅನುಭವವಾಗಲಿ. ಪರಿವರ್ತನೆಯ ಅನುಭವವಾಗಲಿ. ಪರಿಸ್ಥಿತಿಗಳಂತೂ ವ್ಯಕ್ತಿಯ ಮೂಲಕ, ಪ್ರಕೃತಿಯ ಮೂಲಕ ಅಥವಾ ಮಾಯೆಯ ಮೂಲಕ ಈ ಬ್ರಾಹ್ಮಣಜೀವನದಲ್ಲಿ ಬರಲೇಬೇಕಾಗಿದೆ ಆದರೆ ಸ್ವಸ್ಥಿತಿಯ ಶಕ್ತಿಯು ಪರಿಸ್ಥಿತಿಯ ಪ್ರಭಾವವನ್ನು ಒಂದು ಮನೋರಂಜನೆಯ ದೃಶ್ಯವು ಬಂದಿತು. ಹೊರಟುಹೋಯಿತು ಎಂಬಂತೆ ಸಮಾಪ್ತಿ ಮಾಡಬೇಕು. ಸಂಕಲ್ಪದಲ್ಲಿಯೂ ಪರಿಸ್ಥಿತಿಯ ಏರುಪೇರಿನ ಅನುಭೂತಿಯಾಗಬಾರದು. ನೆನಪಿನ ಯಾತ್ರೆಯು ಸಹಜವೂ ಆಗಿರಲಿ ಮತ್ತು ಶಕ್ತಿಶಾಲಿಯೂ ಆಗಿರಲಿ. ಶಕ್ತಿಶಾಲಿ ನೆನಪು ಒಂದು ಸಮಯದಲ್ಲಿ ಡಬಲ್ ಅನುಭವ ಮಾಡಿಸುತ್ತದೆ. ಒಂದುಕಡೆ ನೆನಪು ಅಗ್ನಿಯಾಗಿ ಭಸ್ಮ ಮಾಡುವ ಕೆಲಸ ಮಾಡುತ್ತದೆ, ಪರಿವರ್ತನೆ ಮಾಡುವ ಕೆಲಸ ಮಾಡುತ್ತದೆ. ಮತ್ತೊಂದುಕಡೆ ಖುಷಿ ಹಾಗೂ ಹಗುರತೆಯ ಅನುಭವ ಮಾಡಿಸುತ್ತದೆ. ಈ ರೀತಿಯ ವಿಧಿಪೂರ್ವಕ ಶಕ್ತಿಶಾಲಿ ನೆನಪನ್ನೇ ಯಥಾರ್ಥ ನೆನಪೆಂದು ಹೇಳಲಾಗುತ್ತದೆ.** ಆದರೂ ಬಾಪ್‌ದಾದಾ ಮಕ್ಕಳ ಉಮ್ಮಂಗ ಮತ್ತು ಲಗನ್‌ನ್ನು ನೋಡಿ ಖುಷಿಪಡುತ್ತೇವೆ. ಮೆಜಾರಿಟಿ ಮಕ್ಕಳಿಗೆ ಲಕ್ಷ್ಯವು ಚೆನ್ನಾಗಿ ಸ್ಮೃತಿಯಲ್ಲಿದ್ದಿತು, ಸ್ಮೃತಿಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಿದ್ದೀರಿ ಆದರೆ ಸ್ಮೃತಿಯ ಜೊತೆ ಸಾಮರ್ಥ್ಯವಿರಬೇಕು. ಅದರಲ್ಲಿ ನಂಬರ್‌ವಾರ್ ಇದ್ದಾರೆ. ಸ್ಮೃತಿ ಮತ್ತು ಸಾಮರ್ಥ್ಯ ಎರಡೂ ಜೊತೆಜೊತೆಗೆ ಇರಲಿ. ಅವರಿಗೇ ನಂಬರ್‌ವನ್ ಬಹುಮಾನಕ್ಕೆ ಯೋಗ್ಯರೆಂದು ಹೇಳಲಾಗುತ್ತದೆ. ಸ್ಮೃತಿಯು ಸದಾ ಇದ್ದು ಸಾಮರ್ಥ್ಯವು ಕೆಲಕೆಲವೊಮ್ಮೆ ಅಥವಾ ಪರ್ಸೆಂಟೇಜ್‌ನಲ್ಲಿದ್ದರೆ ಅವರನ್ನು

ನಂಬರ್‌ವಾರ್‌ನ ಪಟ್ಟಿಯಲ್ಲಿ ಸೇರಿಸಲಾಗುವುದು, ತಿಳಿಯಿತೇ. ಸರಿಯಾಗಿ ಚಾರ್ಟ್ ಇಡುವವರ ಹೆಸರುಗಳ ಮಾಲೆಯಾಗುವುದು. ಈಗಲೂ ಸಹ ಬಹಳಷ್ಟು ಇಲ್ಲದಿದ್ದರೂ ಸ್ವಲ್ಪ ಸಮಯವಾದರೂ ಉಳಿದುಕೊಂಡಿದೆ. ಈ ಸ್ವಲ್ಪ ಸಮಯದಲ್ಲಿಯೂ ವಿಧಿಪೂರ್ವಕ ಪುರುಷಾರ್ಥದ ವೃದ್ಧಿ ಮಾಡಿಕೊಂಡು ತಮ್ಮ ಮನ-ಬುದ್ಧಿ-ಕರ್ಮ ಹಾಗೂ ಸಂಬಂಧವನ್ನು ಸದಾ ಅಚಲ-ಅಡೋಲ ಮಾಡಿಕೊಂಡಿದ್ದೇ ಆದರೆ ಈ ಸ್ವಲ್ಪಸಮಯದ ಅಚಲ-ಅಡೋಲ ಸ್ಥಿತಿಯ ಪುರುಷಾರ್ಥವು ಮುಂದೆ ಹೋದಂತೆ ಬಹಳ ಕೆಲಸಕ್ಕೆ ಬರುವುದು ಮತ್ತು ಸಫಲತೆಯ ಖುಷಿಯನ್ನು ತಾವೂ ಅನುಭವ  ಮಾಡುತ್ತೀರಿ ಮತ್ತು ಅನ್ಯರ ಮೂಲಕವೂ ಸಂತುಷ್ಟತೆಯ ಆಶೀರ್ವಾದಗಳನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾ ಇರುತ್ತೀರಿ ಆದ್ದರಿಂದ ಸಮಯವು ಕಳೆದುಹೋಯಿತು ಎಂದು ತಿಳಿದುಕೊಳ್ಳಬೇಡಿ. ಈಗಲೂ ವರ್ತಮಾನ ಹಾಗೂ ಭವಿಷ್ಯವನ್ನು ಶ್ರೇಷ್ಠ ಮಾಡಿಕೊಳ್ಳಬಲ್ಲಿರಿ.

ಈಗಲೂ ವಿಶೇಷ ಸ್ಮೃತಿಯ ಮಾಸ ಅಧಿಕ ವರದಾನವನ್ನು ಪ್ರಾಪ್ತಿ ಮಾಡಿಕೊಳ್ಳುವ ಮಾಸವಾಗಿದೆ. ಹೇಗೆ ತಪಸ್ಯಾ ವರ್ಷದ ಅವಕಾಶವು ಸಿಕ್ಕಿತು ಹಾಗೆಯೇ ಸ್ಮೃತಿ ಮಾಸದ ವಿಶೇಷ ಅವಕಾಶವಿದೆ. ಈ ತಿಂಗಳಿನ 30 ದಿನಗಳಾದರೂ ಒಂದುವೇಳೆ ಸಹಜ, ಸ್ವತಹ, ಶಕ್ತಿಶಾಲಿ, ವಿಜಯೀ ಆತ್ಮನ ಅನುಭವ ಮಾಡಿದ್ದೇ ಆದರೆ ಇದೂ ಸಹ ಸದಾಕಾಲಕ್ಕಾಗಿ ಸ್ವಾಭಾವಿಕ ಸಂಸ್ಕಾರವನ್ನು ಮಾಡಿಕೊಳ್ಳುವ ಉಡುಗೊರೆಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಏನಾದರೂ ಬರಲಿ, ಏನಾದರೂ ಆಗಲಿ ಪರಿಸ್ಥಿತಿಯೆಂಬ ದೊಡ್ಡ-ದೊಡ್ಡ ಪರ್ವತಗಳೇ ಬಂದುಬಿಡಲಿ, ಸಂಸ್ಕಾರದ ಘರ್ಷಣೆಯ ಮೋಡಗಳೇ ಬಂದುಬಿಡಲಿ, ಪ್ರಕೃತಿಯು ಪರೀಕ್ಷೆ ತೆಗೆದುಕೊಳ್ಳಲಿ ಆದರೆ ಅಂಗದನ ಸಮಾನ ಮನ-ಬುದ್ಧಿರೂಪಿ ಕಾಲನ್ನು ಅಲುಗಾಡಿಸಬೇಡಿ. ಅಚಲರಾಗಿ ಇರಿ. ಹಿಂದೆ ಒಂದುವೇಳೆ ಯಾವುದೇ ಏರುಪೇರಾಗಿದ್ದರೂ ಸಹ ಅದನ್ನು ಸಂಕಲ್ಪದಲ್ಲಿಯೂ ಸ್ಮೃತಿಗೆ ತಂದುಕೊಳ್ಳಬೇಡಿ. ಫುಲ್‌ಸ್ಟಾಪ್ ಇಟ್ಟುಬಿಡಿ. ವರ್ತಮಾನವನ್ನು ತಂದೆಯ ಸಮಾನ ಶ್ರೇಷ್ಠ, ಸಹಜ ಮಾಡಿಕೊಳ್ಳಿರಿ ಮತ್ತು ಭವಿಷ್ಯವನ್ನು ಸದಾ ಸಫಲತೆಯ ಅಧಿಕಾರದಿಂದ ನೋಡಿರಿ. ಈ ವಿಧಿಯಿಂದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳರಿ. ನಾಳೆಯಿಂದಲ್ಲ, ಈಗಿನಿಂದಲೇ ಮಾಡಬೇಕಾಗಿದೆ. ಸ್ಮೃತಿಮಾಸದ ಸ್ವಲ್ಪಸಮಯದಲ್ಲಿ ಬಹಳಕಾಲದ ಸಂಸ್ಕಾರವನ್ನು ಮಾಡಿಕೊಳ್ಳಿರಿ. ಈ ವಿಶೇಷ ವರದಾನವನ್ನು ವಿಧಿಪೂರ್ವಕವಾಗಿ ಪ್ರಾಪ್ತಿ ಮಾಡಿಕೊಳ್ಳಿರಿ. ವರದಾನದ ಅರ್ಥವು ಆಲಸಿಗಳಾಗಿಬಿಡುವುದಲ್ಲ ಆದರೆ ಸಹಜ ಪುರುಷಾರ್ಥಿಗಳಾಗಿ, ಒಳ್ಳೆಯದು-

ಕುಮಾರಿಯರ ಸಂಘಟನೆ ಕುಳಿತಿದೆ. ಮುಂದೆ ಕೂಡುವ ಅವಕಾಶ ಏಕೆ ಸಿಕ್ಕಿದೆ? ಸದಾ ಮುಂದಿರಬೇಗಾಗಿದೆ ಅದಕ್ಕಾಗಿ ಮುಂದೆ ಕುಳಿತುಕೊಳ್ಳುವ ಅವಕಾಶ ಸಿಕ್ಕಿದೆ. ತಿಳಿಯಿತೇ? ಪರಿಪಕ್ವ ಹಣ್ಣಾಗಿ ಹೊರ ಬರಬೇಕು, ಕಚ್ಚಾವಾಗಿದ್ದಾಗಲೇ ಬಿಳಬೇಡಿ. ಒಂದು ತಮ್ಮ ಸಾಹಸವಿದ್ದರೆ ಯಾರು ಯಾರನ್ನು ನಿಲ್ಲುವುಸುವುದಕ್ಕೆ ಸಾಧ್ಯವಿಲ್ಲ. ಎಲ್ಲರೂ ಓದನ್ನು ಪೂರ್ಣಮಾಡಿ ಸೆಂಟರ್ ಹೋಗುವಿರೋ ಅಥವಾ ಮನೆಗೆ ಹೋಗುವಿರೋ? ಒಂದು ವೇಳೆ ತಾಯಿ-ತಂದೆ ಬಾ ಎಂದರೆ ಏನು ಮಾಡುವಿರಿ? ತಮ್ಮ ಸಾಹಸವಿದ್ದರೆ ಯಾರು ಯಾರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಸ್ವಲ್ಪ-ಸ್ವಲ್ಪ ಆಕರ್ಷಣೆಯಿದ್ದರೆ ತಡೆಯುವವರು ತಡೆಯುತ್ತಾರೆ.

ಹೊಸ ವರ್ಷವನ್ನು ಆಚರಿಸಲು ಎಲ್ಲರೂ ಓಡಿ ಬಂದು ಸೇರಿದ್ದೀರಿ. ಹೊಸ ವರ್ಷವನ್ನು ಆಚರಿಸುವುದು ಅರ್ಥಾತ್ ಪ್ರತಿ ಸಮಯವನ್ನು ಹೊಸದನ್ನಾಗಿ ಮಾಡುವುದು. ಪ್ರತಿ ಸಮಯ ತಮ್ಮಲ್ಲಿ ಆತ್ಮೀಯ ನವಿನತೆಯನ್ನು ತರಬೇಕಾಗಿದೆ..

ನಾಲ್ಕಾರು ಕಡೆಯ ಅತೀ ಸ್ನೇಹಿ ಮತ್ತು ಸಹಯೋಗಿ ಮಕ್ಕಳು ಸಹ ಇಂದಿನ ಮಹತ್ವವನ್ನು ತಿಳಿದು ವಿಶೇಷ ಹೃದಯದಿಂದ ಅಥವಾ ಪತ್ರ ಅಥವಾ ಕಾರ್ಡ್ ಮೂಲಕ ವಿಶೇಷ ನೆನಪು ಮಾಡುತ್ತಿದ್ದಾರೆ ಮತ್ತು ಬಾಪ್‌ದಾದಾರವರ ಹತ್ತಿರ ಪೋಸ್ಟ್ ಮಾಡುವ ಮೊದಲೇ ತಲುಪಿಬಿಡುತ್ತದೆ. ಬರೆಯುವುದಕ್ಕೆ ಮೊದಲೇ ತಲುಪಿಬಿಡುತ್ತದೆ. ಸಂಕಲ್ಪ ಮಾಡಿದರು ಮತ್ತು ತಲುಪಿಬಿಟ್ಟಿತು. ಅದಕ್ಕೆ ಕೆಲವು ಮಕ್ಕಳ ಸಹಯೋಗಿಗಳ ಕಾರ್ಡ್ ನಂತರ ತಲುಪುತ್ತದೆ ಆದರೆ ಬಾಪ್‌ದಾದಾರವರಿಂದ ಮೊದಲಿಂದಲೇ ಎಲ್ಲರಿಗೆ ಹೊಸ ಯುಗದಲ್ಲಿ ಹೊಸ ದಿನವನ್ನು ಆಚರಿಸುವ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಹೇಗೆ ವಿಶೇಷ ಕಾರ್ಯಕ್ರಮವಿದ್ದರೆ ಇತ್ತೀಚಿನ ಜನರು ಏನು ಮಾಡುತ್ತಾರೆ? ತಮ್ಮ ಟಿ.ವಿ. ಯನ್ನು ತೆರೆದು ಕುಳಿತು ಬಿಡುತ್ತಾರೆ. ಎಲ್ಲಾ ಆತ್ಮಿಕ ಮಕ್ಕಳು ತಮ್ಮ ಬುದ್ದಿಯ ದೂರದರ್ಶನವನ್ನು

ಸ್ವಿಚ್ ಆನ್ ಮಾಡಿ ಕುಳಿತಿದ್ದೀರಿ. ಬಾಪ್‌ದಾದಾರವರು ನಾಲ್ಕಾರು ಕಡೆಯ ಶುಭಾಶಯಕ್ಕೆ ಮಾತ್ರ ಮಕ್ಕಳಿಗೆ ಪ್ರತಿ ಸೆಕೆಂಡ್‌ನ ಶುಭಾಶಯದ ಆಶೀರ್ವಾದಗಳನ್ನು ಪ್ರತ್ಯುತ್ತರದಲ್ಲಿ ಕೊಡುತ್ತಿರುತ್ತಾರೆ. ಪ್ರತಿ ಸಮಯದ ನೆನಪು ಮತ್ತು ಪ್ರೀತಿ ಇದೇ ಆಶೀರ್ವಾದಗಳು ಮಕ್ಕಳ ಹೃದಯದ ಉಮಂಗ-ಉತ್ಸಾಹ ಹೆಚ್ಚಿಸುತ್ತಿರುತ್ತದೆ. ಸದಾ ಸ್ವಯಂನ್ನು ಸಹಜ ಪುರುಷಾರ್ಥಿ ಮತ್ತು ಸದಾ ಪುರುಷಾರ್ಥಿ. ಸದಾ ವಿಧಿಯಿಂದ ವೃದ್ಧಿಯನ್ನು ಪ್ರಾಪ್ತಿಮಾಡಿ ಮಾಡಿಕೊಳ್ಳುವಂತಹ ಯೋಗ್ಯ ಆತ್ಮರಾಗಿ ಹಾರುತ್ತೀರಿ.

**ಸದಾ ವರ್ತಮಾನವನ್ನು ತಂದೆಯ ಸಮಾನ ಮಾಡಿಕೊಳ್ಳುವಂತಹ ಮತ್ತು ಭವಿಷ್ಯವನ್ನು ಸಫಲತಾಸ್ವರೂಪವನ್ನಾಗಿ ಮಾಡಿಕೊಳ್ಳುವ ಶ್ರೇಷ್ಠ ಶುಭಾಷಯಗಳಿಗೆ ಪಾತ್ರರಾದ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 31-12-1991.

***ಯಥಾರ್ಥ ಚಾರ್ಟ್ ನ ಅರ್ಥವಾಗಿದೆ ಪ್ರಗತಿ ಮತ್ತು ಪರಿವರ್ತನೆ.***

ಬ್ರಾಹ್ಮಣ ಜೀವನ ಅರ್ಥಾತ್ ಹೊಸ ಜೀವನ, ಹೊಸ ಜ್ಞಾನ, ಹೊಸ ವೃತ್ತಿ, ಹೊಸ ದೃಷ್ಟಿ, ಹೊಸ ಸೃಷ್ಟಿಯಲ್ಲಿಯೇ ಬಂದಿದ್ದೀರಿ, ರಾತ್ರಿ, ಹಗಲು, ಪ್ರತಿಕ್ಷಣ ಹೊಸದಾಗಿ ಕಾಣಿಸುತ್ತದೆ. ನಿಸ್ವಾರ್ಥ ಪ್ರೀತಿಯಿಂದ ಕೂಡಿರುವ ಸಂಬಂಧ ಲಭಿಸುತ್ತದೆ. ಅದೃಷ್ಟವಂತರಾಗಿ ಖುಷಿಯ ಖಜಾನೆಯಿಂದ ಸಂಪೂರ್ಣವಾಗಿ ಸುಖದಿಂದ ಇರುತ್ತಾರೆ. ಪ್ರತಿಕ್ಷಣ ನಾಟ್ಯವನ್ನು ಮಾಡುತ್ತಾ ಪ್ರತಿದಿನ ಬ್ರಹ್ಮ ಭೋಜನವನ್ನು ತಿನ್ನುತ್ತೀರಿ. ಪ್ರತಿ ಸಮಯ ಉತ್ಸಾಹದಿಂದ ತುಂಬಿರುವ ಜೀವನದಲ್ಲಿ ಹಾರುತ್ತಾ ಇರುತ್ತೀರಿ. ಬ್ರಾಹ್ಮಣ ಜೀವನದ ಶ್ವಾಸವೇ ಉತ್ಸಾಹ. ಸಾಕ್ಷಿಯಾಗಿ ನಿಮ್ಮ ಚಾರ್ಟನ್ನು ಪರಿಶೀಲಿಸಿದಾಗ 1. ಸ್ವಯಂನ ಚಾರ್ಟ್ ಸತ್ಯವಾದ ಮನಸ್ಸಿನಿಂದ ಸತ್ಯವಾದ ಹೃದಯದಿಂದ ಸ್ವಯಂ ಸಂತುಷ್ಟವಾಗಿ ಇರಬೇಕು. 2.ಬಾಪ್‌ದಾದಾರವರ ಬಯಕೆಯಂತೆ ಸ್ಮೃತಿಯ ಪರ್ಸೆಂಟೇಜ್ ನ ವಿಧಿಯಿಂದ ಮನಸಾ, ವಾಚಾ, ಕರ್ಮಣಾ ಸಂಬಂಧ ಸಂಪರ್ಕಗಳಲ್ಲಿ ತಂದೆಯನ್ನು ಸಂತುಷ್ಟ ಮಾಡಬೇಕು. 3.ಬ್ರಾಹ್ಮಣ ಪರಿವಾರ ನಿಮ್ಮ ಶ್ರೇಷ್ಠಯೋಗಿ ಜೀವನದಿಂದ ಸಂತುಷ್ಟವಾಗಿ ಇರಬೇಕು. ನಿಮ್ಮ ಸ್ಮೃತಿ ಒಂದು ಕಡೆ ಅಗ್ನಿಯಾಗಿ ಬಸ್ಮ ಮಾಡುವ ಕಾರ್ಯವನ್ನು ಮಾಡಬೇಕು. ಮತ್ತೊಂದು ಕಡೆ ಖುಷಿ ಮತ್ತು ಹಗುರತೆಯನ್ನು ಅನುಭವ ಮಾಡಿಸಬೇಕು. ಅಚಲ/ಸ್ಥಿರ ಸ್ಥಿತಿಯ ಪುರುಷಾರ್ಥದಿಂದ ಸಫಲತೆಯ ಖುಷಿಯನ್ನು ಸ್ವಯಂ ಮತ್ತು ಇತರರಿಗೆ ಅನುಭವ ಮಾಡಿಸಬೇಕು. ಸಹಜವಾಗಿ ಸ್ವತಹವಾಗಿ ಶಕ್ತಿಶಾಲಿ ವಿಜಯೀ ಆತ್ಮನಾಗಲು ಸದಾಕಾಲದ ಸಂಸ್ಕಾರವನ್ನಾಗಿ ಮಾಡಿಕೊಳ್ಳಬೇಕು. ಭವಿಷ್ಯವನ್ನು ಸದಾ ಸಫಲತೆಯ ಅಧಿಕಾರದಿಂದ ನೋಡಬೇಕು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್‌ದಾದಾ ಮತ್ತು ಸಹೋದರಿ ಸಹೋದರರು ಎಂಬ ಭಾವನೆಯಿಂದ ನಿಸ್ವಾರ್ಥ ಪ್ರೀತಿಯಿಂದ ಕೂಡಿರುವ ಸಂಬಂಧಗಳನ್ನು ರಚಿಸಿಕೊಂಡಿದ್ದೇನೆ. (ವಿಶ್ವಾತ್ಮರೊಂದಿಗೆ ಸಹೋದರ ಸಹೋದರಿಯರ ಸಂಬಂಧವನ್ನು ಜೋಡಿಸಬೇಕು)

2. ನಾನು ಹಳೆಯ ಜೀವನದಿಂದ ಸದಾಕಾಲದ ಶುಭಾಶಯಗಳನ್ನು, ಅದೃಷ್ಟವನ್ನು, ಖುಷಿಯ ಖಜಾನೆಗಳಿಂದ, ಸಂಪನ್ನವಾಗಿ, ಸುಖದಿಂದ ಇದ್ದೇನೆ.

3. ನಾನು ಬಾಪ್‌ದಾದಾರವರಿಂದ ಶುಭಾಶಯಗಳು ಅಭಿನಂದನೆಗಳು, ಆಶೀರ್ವಚನಗಳನ್ನು ಪಡೆದು ಪ್ರತಿಕ್ಷಣ ಮುರಳಿಯನ್ನು ಕೇಳಿ ನಲಿಯುತ್ತಾ, ಹಾಡುತ್ತಾ, ಪ್ರತಿದಿನ ಬ್ರಹ್ಮ ಭೋಜನವನ್ನು ಸ್ವೀಕರಿಸುತ್ತಿದ್ದೇನೆ.

4. ನಾನು ಸದಾ ಉತ್ಸಾಹದಲ್ಲಿ ಇರುತ್ತಾ ನಿರಾಶವಾದಿಗಳನ್ನು ಆಶಾವಾದಿಗಳನ್ನಾಗಿ ಮಾಡುವ ಸೇವೆಯನ್ನು ಮಾಡಿದ್ದೇನೆ.

5. ನಾನು ಸ್ವಯಂನ ಚಾರ್ಟ್ ನಿಂದ ಸತ್ಯವಾದ ಮನಸ್ಸಿನಿಂದ, ಸತ್ಯವಾದ ಹೃದಯದಿಂದ ಸ್ವಯಂ ಸಂತುಷ್ಟವಾಗಿದ್ದೇನೆ.

6. ನಾನು ವಿಧಿ ಪೂರ್ವಕ ನೆನಪಿನ ಪರ್ಸೆಂಟೇಜ್ ನಿಂದ ಮತ್ತು ಮನ-ವಚನ-ಕರ್ಮ ಸಂಪರ್ಕದಲ್ಲಿ ಸಂಪೂರ್ಣ ಚಾರ್ಟನ್ನು ಇಟ್ಟುಕೊಂಡು ತಂದೆಯನ್ನು ಕೂಡ ಖುಷಿಪಡಿಸಿದ್ದೇನೆ.

3. ನಾನು ನನ್ನ ಶ್ರೇಷ್ಠ ಯೋಗಿ ಜೀವನದಿಂದ ಬ್ರಾಹ್ಮಣ ಪರಿವಾರವನ್ನು ಸಂತುಷ್ಟಪಡಿಸಿದ್ದೇನೆ. (ಈ ಮೂರು ವಿಧವಾದ ಸಂತುಷ್ಟತೆಗಳಿಂದ ಬಹುಮಾನಕ್ಕೆ ಯೋಗ್ಯವಾಗಿ ತಯಾರಾಗುತ್ತೇವೆ).

4. ನಾನು ಆಜ್ಞಾಕಾರಿಯಾಗಿ ಚಾರ್ಟ್ ನಿಂದ ಪುರುಷಾರ್ಥದ ವಿಧಿ ಮತ್ತು ವೃದ್ಧಿಯ ಅಂಕಗಳನ್ನು ಪಡೆದಿದ್ದೇನೆ.

5. ನಾನು ಕರ್ಮ, ಸಂಬಂಧ ಮತ್ತು ಸಂಸ್ಕಾರ ಈ ಮೂರರಲ್ಲಿ ನವೀನತೆಯ ವಿಶೇಷತೆಯನ್ನು ಸ್ವಯಂನಲ್ಲಿ ಅನುಭವ ಮಾಡಿಕೊಂಡು ಇತರರಿಗೂ ಕೂಡ ಅನುಭವ ಮಾಡಿಸಿದ್ದೇನೆ.

6. ನಾನು ಪ್ರತಿಯೊಂದು ಸಬ್ಜೆಕ್ಟ್ ನಲ್ಲಿ ಪ್ರಗತಿ, ಪರಿವರ್ತನೆಯನ್ನು ಅನುಭವ ಮಾಡಿಕೊಂಡು ವ್ಯಕ್ತಿ, ಪ್ರಕೃತಿ, ಮಾಯೆಯಿಂದ ಬರುವ ಪರಿಸ್ಥಿತಿಗಳನ್ನು ಸ್ವಸ್ಥಿತಿಯ ಶಕ್ತಿಯ ಪ್ರಭಾವದಿಂದ ಮನೋರಂಜನೆಯ ದೃಶ್ಯದಂತೆ ಸಮಾಪ್ತಿ ಮಾಡಿದ್ದೇನೆ. (ಇದು ಯಥಾರ್ಥ ಚಾರ್ಟ್ ನ ಅರ್ಥ)

7. ನಾನು ಶಕ್ತಿಶಾಲಿ ಸ್ಮೃತಿಯಿಂದ ಡಬಲ್ ಅನುಭವ ಅರ್ಥಾತ್ ಸ್ಮೃತಿ ಅಗ್ನಿಯಾಗಿ ಭಸ್ಮ ಮಾಡುವ ಕಾರ್ಯ, ಪರಿವರ್ತನೆ ಮತ್ತು ಖುಷಿ ಹಾಗೂ ಹಗುರತೆಯ ಅನುಭವ ಮಾಡಿಕೊಂಡಿದ್ದೇನೆ.

8. ನಾನು ಸ್ಮೃತಿ ಮತ್ತು ಸಮರ್ಥತೆ ಎರಡನ್ನು ಜೊತೆ ಜೊತೆಗೆ ಧಾರಣೆ ಮಾಡಿ ಮೊದಲ ನಂಬರ್ ನ ಬಹುಮಾನವನ್ನು ಪಡೆದಿದ್ದೇನೆ.

9. ನಾನು ಸಂಗಮಯುಗದ ಅಚಲ ಸ್ಥಿರಸ್ಥಿತಿ ಎಂಬ ಪುರುಷಾರ್ಥದಿಂದ ಸಫಲತೆಯ ಖುಷಿಯನ್ನು ಸ್ವಯಂ ಅನುಭವ ಮಾಡಿಕೊಂಡು ಸಂತುಷ್ಟತೆಯ ಆಶೀರ್ವಾದಗಳನ್ನು ಇತರರಿಂದ ಪಡೆದಿದ್ದೇನೆ.

10. ನಾನು ಏನೇ ಬಂದರೂ, ಏನೇ ಆದರೂ, ಪರಿಸ್ಥಿತಿ ರೂಪದ ದೊಡ್ಡ ದೊಡ್ಡ ಪರ್ವತಗಳೇ ಬಂದರೂ, ಸಂಸ್ಕಾರಗಳ ಘರ್ಷಣೆಯ ಮೋಡಗಳೇ ಬಂದರೂ, ಪ್ರಕೃತಿಯು ಕೂಡ ಪರೀಕ್ಷೆ ತೆಗೆದುಕೊಂಡಾಗಲೂ ಮನಸ್ಸು, ಬುದ್ಧಿರೂಪದ ಕಾಲನ್ನು ಅಲುಗಾಡಿಸಿದೆ ಅಂಗದನ ಸಮಾನವಾಗಿ ಇದ್ದೇನೆ.

11. ನಾನು ಸದಾ ವರ್ತಮಾನವನ್ನು ತಂದೆಯ ಸಮಾನವಾಗಿ ಮಾಡಿಕೊಂಡು ಭವಿಷ್ಯವನ್ನು ಸಫಲತಾ ಸ್ವರೂಪವಾಗಿ ತಯಾರಿಸಿಕೊಂಡಿದೆನೆ.

12. ನಾನು ಸದಾ ಸ್ವಯಂ ಅನ್ನು ಸಹಜ ಪುರುಷಾರ್ಥಿಯಾಗಿ ಮತ್ತು ಸದಾ ಪುರುಷಾರ್ಥಿಯಾಗಿ ಸದಾ ವಿಧಿಯಿಂದ ವೃದ್ಧಿಯನ್ನು ಪಡೆದು ಯೋಗ್ಯವಾಗಿ ತಯಾರು ಮಾಡಿಕೊಂಡು ಹಾರುತ್ತ ಇದ್ದೇನೆ.